ದಿನಾಂಕ 08.01.2020 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀಸವಾಲು ಃ ಪ್ರತಿವಾದಿಗಳ ಪರ ಶ್ರೀ ಕೆ.ಯು ವಕೀಲರಿಂದಃ**

ನಾನು ಎಂ.ಎ ಪಧವಿದರೆ. ದಾವಾ ಸ್ವತ್ತಿನ ಪೂರ್ವಕ್ಕೆ ಪ್ರತಿವಾದಿಗಳ ಜಮೀನು ಎಂದು ಹೇಳಿರುವುದು ಸರ್ವೆ ನಂಬರ್ 229/2 ಮತ್ತು 3 ಎಂದರೆ ಸರಿ. ಸರ್ವೆ ನಂಬರ್ 229/3 2ನೇ ಪ್ರತಿವಾದಿಗೆ ಸೇರಿದ ಜಮೀನು ಎಂದರೆ ಸರಿ. ಸರ್ವೆ ನಂಬರ್ 229/2 1 ಮತ್ತು 3 ರಿಂದ 7ನೇ ಪ್ರತಿವಾದಿಗಳಿಗೆ ಸೇರಿದ ಜಮೀನು ಎಂದರೆ ಸರಿ. ದಾವಾ ಸ್ವತ್ತು ಮತ್ತು ಪ್ರತಿವಾದಿಗಳ ಜಮೀನಿನ ಮಧ್ಯದಲ್ಲಿ 30 ಅಡಿ ವಿಸ್ತೀರ್ಣದ ರಸ್ತೆ ಪಿಳ್ಳೇಮಲ್ಲಯ್ಯನಪಾಳ್ಯದಿಂದ ಕೆಂಚಿಗನಹಳ್ಳಿ ಮತ್ತು ಇತರೆ ಗ್ರಾಮಗಳಿಗೆ ಹಾದು ಹೋಗುತ್ತದೆ ಎಂದರೆ ಸರಿಯಲ್ಲ, ರಸ್ತೆ ನಮ್ಮ ಜಮೀನಿನ ಮಧ್ಯದಲ್ಲಿದೆ. ರಸ್ತೆಯ ಪಶ್ಚಿಮದ ಕಡೆ ವಿದ್ಯುತ್ ಲೈನ್‌ಗಳು ಹಾಗೂ ನೀರಿನ ಕಾಲುವೆ (ಪೈಪ್ ಮೂಲಕ) ಹಾದು ಹೋಗಿದೆ ಎಂದರೆ ಸರಿಯಲ್ಲ.

2. ನಮ್ಮ ಜಮೀನಿನಲ್ಲಿ ಇದ್ದ ರಸ್ತೆಯನ್ನು ನನ್ನ ತಂದೆ ಹಾಗೂ ಪೂರ್ವಿಕರು ಜಮೀನಿನ ಪೂರ್ವದ ಹಂಚಿಗೆ ವರ್ಗಾಯಿಸಿ, ಜಮೀನಿನ ಮಧ್ಯದಲ್ಲಿದ್ದ ರಸ್ತೆಯನ್ನು ಸಾಗುವಳಿ ಜಮೀನಾಗಿ ಮಾರ್ಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ರಸ್ತೆ ಮೊದಲು ಕಚ್ಚಾ ರಸ್ತೆಯಾಗಿದ್ದು, ಹಾಲಿ ಡಾಂಬರ್ ರಸ್ತೆಯಾಗಿ ಅಸ್ತಿತ್ವದಲ್ಲಿದೆ ಎಂದರೆ ಸರಿ. ರಸ್ತೆಯನ್ನು ಈಗ್ಗೆ 3-4 ವರ್ಷಗಳ ಹಿಂದೆ ನವೀಕರಣ ಮಾಡಿದ್ದಾರೆ ಎಂದರೆ ಸರಿಯಲ್ಲ. ಈಗ ತೋರಿಸಿದ 5 ಫೋಟೋಗಳಲ್ಲಿ ನಾನು ಮೇಲೆ ಒಪ್ಪಿದ ಡಾಂಬರ್ ರಸ್ತೆ ಕಂಡುಬರುತ್ತದೆ ಎಂದರೆ ಸರಿ. ಸದರಿ ಫೋಟೋಗಳನ್ನು ನಿ.ಡಿ.1 ರಿಂದ 5 ಎಂದು ಗುರುತಿಸಲಾಯಿತು. ನಿ.ಡಿ.1 ರಿಂದ 5 ರಲ್ಲಿ ಕಂಡುಬರುವ ತೋಟ ರಸ್ತೆಯ ಪೂರ್ವ ದಿಕ್ಕಿನ ಕಡೆ ಇದೆ ಎಂದರೆ ಸರಿ. ನಿ.ಡಿ.1 ರಲ್ಲಿ ಕಂಡುಬರುವ ಗೇಟ್ ಹಾಗೂ ಬಿಳಿ ಬಣ್ಣದ ಕಟ್ಟಡ 2ನೇ ಪ್ರತಿವಾದಿಯ ಮನೆ ಎಂದರೆ ಸರಿಯಲ್ಲ. ನಿ.ಡಿ.1 ರಿಂದ 5 ರಲ್ಲಿ ರಸ್ತೆಯ ಪೂರ್ವಕ್ಕೆ ಕಂಡುಬರುವ ಫೋಟೋಗಳು 229/2 ಮತ್ತು 3 ರ ಜಮೀನುಗಳಲ್ಲಿ ಇದೆ ಎಂದರೆ ಸರಿಯಲ್ಲ, ಸರ್ವೆ ನಂಬರ್ 229/1 ರಲ್ಲಿ ಇದೆ ಎನ್ನುತ್ತಾರೆ. ನಿ.ಡಿ.1 ರಿಂದ 5 ರಸ್ತೆಯ ಪಶ್ಚಿಮಕ್ಕೆ ಅಡಿಕೆ ತೋಟ ಇಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ತೋಟ ಇದ್ದು, ಈಗ ಹಾಳಾಗಿದೆ ಎನ್ನುತ್ತಾರೆ.

3. ಸರ್ವೆ ನಂಬರ್ 229/1 ರಲ್ಲಿ ನನ್ನ ತಂದೆ ಅಥವಾ ನಾವು ಯಾವತ್ತೂ ಅಡಿಕೆ-ತೆಂಗಿನ ತೋಟ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಈ ರೀತಿ ಅಡಿಕೆ-ತೆಂಗಿನ ತೋಟ ಮಾಡಿದ ಬಗ್ಗೆ ದಾಖಲೆ ಇದೆಯೇ ಎಂದರೆ ಆ ಬಗ್ಗೆ ಯಾವುದೇ ದಾಖಲೆ ಸಿಗುವುದಿಲ್ಲ. ದಾವಾ ಸ್ವತ್ತಿನಲ್ಲಿ ನೀರಾವರಿ ಬೇಸಾಯ ಇಲ್ಲ, ಮಳೆ ಆಧಾರಿತ ಕೃಷಿ ಮಾಡುತ್ತೇವೆ. ಸರ್ವೆ ನಂಬರ್ 229/2 ಮತ್ತು 3 ರ ಜಮೀನುಗಳಲ್ಲಿ ನೀರಿನ ಸೌಕರ್ಯ ಇದೆ ಎಂದರೆ ಸರಿ. ಸದರಿ ನೀರಾವರಿ ಸೌಕರ್ಯವನ್ನು ಸರ್ವೆ ನಂಬರ್ 229/2 ಮತ್ತು 3 ರಲ್ಲಿ ಅಡಿಕೆ-ತೆಂಗಿನ ತೋಟ ಮಾಡಿದ್ದಾರೆ ಎಂದರೆ ಆ ಜಮೀನುಗಳಲ್ಲಿ ಮಾಡಿದ್ದಾರೆ.

4. ಈಗ ತೋರಿಸಿದ ಫೋಟೋದಲ್ಲಿ ನಿಂತಿರುವ ವ್ಯಕ್ತಿ 1ನೇ ಪ್ರತಿವಾದಿ ಎಂದರೆ ಸರಿ. ಸದರಿ ಫೋಟೋ ನಿ.ಡಿ.6 ಎಂದು ಗುರುತಿಸಲಾಯಿತು. ನಿ.ಡಿ.6 ರಲ್ಲಿ ಕಂಡುಬರುವ ಅಡಿಕೆ, ತೆಂಗು ಮತ್ತು ಬಾಳೇ ತೋಟ ಸರ್ವೆ ನಂಬರ್ 229/2 ರ ಜಮೀನು ಎಂದರೆ ಸರಿ. ಸರ್ವೆ ನಂಬರ್ 229/1 ರಲ್ಲಿ ವಾಸದ ಅಥವಾ ತೋಟದ ಮನೆ ಇಲ್ಲ ಎಂದರೆ ಸರಿಯಲ್ಲ. ಈ ರೀತಿ ಮನೆ ಕಟ್ಟಿಸಿದ ಬಗ್ಗೆ ದಾಖಲೆ ಇದೆಯೇ ಎಂದರೆ ಅದನ್ನು ಮಿಷನ್ ಮನೆಯಾಗಿ ಮಾಡಿದ್ದು, ದಾಖಲೆ ಇಲ್ಲ. ಸರ್ವೆ ನಂಬರ್ 229/1 ರಲ್ಲಿ ಯಾವುದೇ ಮಿಷನ್ ಮನೆ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ 229/3 ರಲ್ಲಿ ಇರುವ 2ನೇ ಪ್ರತಿವಾದಿಯ ಮನೆಯನ್ನು ನಾನು ಸರ್ವೆ ನಂಬರ್ 229/1 ರಲ್ಲಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ಸರ್ವೆ ನಂಬರ್ 229/1 ರಿಂದ 3 ನ್ನು ಭೂ ಮಾಪಕರು ನಮ್ಮಗಳ ಸಮಕ್ಷಮ ಅಳತೆಯನ್ನು ಮಾಡಿದ್ದಾರೆ ಎಂದರೆ ಸರಿ. ಇದಕ್ಕೆ ಸಂಬಂಧಿಸಿದ ಸರ್ವೆ ದಾಖಲೆಗಳು ನಮ್ಮ ಬಳಿ ಇದೆ ಎಂದರೆ ಸರಿ. ಭೂಮಾಪಕರು ರಸ್ತೆಯು ಸರ್ವೆ ನಂಬರ್ 229/1 ರ ಪೂರ್ವಕ್ಕೆ ಹಾಗೂ ಸರ್ವೆ ನಂಬರ್ 229/2 ರ ಪಶ್ಚಿಮಕ್ಕೆ ಎಂದು ನಕ್ಷೆ ತಯಾರಿಸಿದ್ದಾರೆ ಎಂದರೆ ಸರಿಯಲ್ಲ. ಭೂ ಮಾಪಕರು ಸರ್ವೆ ನಂಬರ್ 229/1 ರಿಂದ 3 ರ ಜಮೀನುದಾರರು ಬೇರೆ ಯಾವುದೇ ಜಮೀನನ್ನು ಒತ್ತುವರಿ ಮಾಡಿಲ್ಲವೆಂದು ತಿಳಿಸಿದ್ದಾರೆ ಎಂದರೆ ಸರಿಯಲ್ಲ. ಭೂಮಾಪನೆಯ ಅಳತೆಯ ವರದಿ ಮತ್ತು ನಕ್ಷೆಯನ್ನು ಸಲ್ಲಿಸದಂತೆ ನಾವು ಭೂ ಮಾಪಕರ ಮೇಲೆ ಒತ್ತಡ ಹಾಕಿ, ವಿಲೇ ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಜಮೀನನ್ನು ಅಳತೆ ಮಾಡದಂತೆ ನಾವು ಅಡ್ಡಿ ಪಡಿಸಿದ್ದೇವೆ

ಎಂದರೆ ಸರಿಯಲ್ಲ. ಅಳತೆ ಮಾಡಿದ್ದಾರೆ. ಪ್ರತಿವಾದಿಗಳ ಜಮೀನನ್ನು ಅಳತೆ ಮಾಡಿರುವ ಕುರಿತು ದಾಖಲೆ ನಮ್ಮ ಬಳಿ ಇಲ್ಲ.

6. ನಿ.ಪಿ.7 ಗ್ರಾಮ ನಕ್ಷೆಯ ಸರ್ವೆ ನಂಬರ್ 229/1 ರ ಮಧ್ಯದಲ್ಲಿ ಕಂಡುಬರುವ ರಸ್ತೆಯನ್ನು ನನ್ನ ತಂದೆ ಮತ್ತು ಪೂರ್ವಿಕರು ಜಮೀನಿನ ಪೂರ್ವದ ಅಂಚಿಗೆ ವರ್ಗಾಯಿಸಿ ರಸ್ತೆ ಜಮೀನನ್ನು ಸಾಗುವಳಿ ಜಮೀನಾಗಿ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಹಿಂದೆ ಇದ್ದ ರಸ್ತೆಯನ್ನು ಪೂರ್ವದ ಅಂಚಿಗೆ ವರ್ಗಾಯಿಸಿದ ಸಂಗತಿ ನನಗೆ ತಿಳಿದಿದ್ದರೂ ಸಹ ನಿರಾಕರಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮೂಲಕ ಜಮೀನಿನ ಸ್ಥಳ ಪರಿಶೀಲನೆ ಮಾಡಲು ನನ್ನ ಯಾವುದೇ ತಕರಾರು ಇಲ್ಲ.

ಮರುವಿಚಾರಣೆ ಇಲ್ಲ

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್‌ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)**

ಓದಿ ಹೇಳಿ ಕೇಳಿ ಸರಿ ಇದೆ,

ಹಿರಿಯ ಸಿ.ಜೆ. ಮತ್ತು ಜೆಎಂಎಫ್.ಸಿ ಸಿರಾ.